**ಓ.ಎಸ್.ನಂ.223/2017** **ಡಿ.ಡಬ್ಲ್ಯೂ:1**

**ದಿಃ09.04.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಈ ದಿನ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಮಜಕೂರುಗಳು ಸತ್ಯವಾಗಿರುತ್ತವೆ.

ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ದಾವಾ ಆಸ್ತಿಯ ಉತಾರ ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು, ದಾವಾ ಆಸ್ತಿಯ ಬೆಲೆಯ ಕುರಿತು ಹಿರಿಯ ಉಪ ನೊಂದಾಣಾಧಿಕಾರಿ ಹುಬ್ಬಳ್ಳಿ ಇವರು ನೀಡಿದ ಪ್ರಮಾಣ ಪತ್ರ ನಿಡಿ 3 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಿದ್ಯು ತ್ ಬಿಲ್ ನಿಡಿ 4 ಎಂದು, 2016-17 ಮತ್ತು 2017-18 ಅಸೆಸ್ಮೆಂಟ ವರ್ಷಗಳ ಆದಾಯ ತೆರಿಗೆ ವಿವರಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಡಿ 5 ಮತ್ತು 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ಪ್ಲಾಟ ನಂ 17 ಮೂಲತಃ ಹಬೀಬ ಅನ್ನುವವರಿಗೆ ಸೇರಿದ್ದು ಅಂದರೆ ಸರಿ. ಇದನ್ನು ನಾನು ಅರ್ಧ ನಮ್ಮ ಮಾವ ಅರ್ಧ ಖರೀದಿಸಿರುತ್ತೇವೆ ಅಂದರೆ ಸರಿ.ನಾನು ಖರೀದಿಸಿದ ಪ್ಲಾಟಗೆ 17/1, ವಾದಿ ಖರೀದಿಸಿದ ಪ್ಲಾಟಗೆ 17/2 ಅಂತಾ ಸಂಖ್ಯೆ ಕೊಡಲಾಗಿದೆ ಅಂದರೆ ಸರಿ.

2. ನಾನು ಮನೆ ಕಟ್ಟಿಸುವಾಗ ಸಲ್ಲಿಸಿದ ನೀಲಿ ನಕ್ಷೆಯಲ್ಲಿ, ಪ್ಲಾಟ ನಂ. 17/1 ರಲ್ಲಿ 900 ಚದುರ ಅಡಿ ಗೆ ಸಲ್ಲಸಿರುತ್ತೇನೆ. ಆದರೆ ಸದರಿ ಮನೆಯನ್ನು 17/1 ಮತ್ತು 17/2 ನ್ನು ಸೇರಿಸಿ ಮದ್ಯ ಭಾಗದಲ್ಲಿ ಕಟ್ಟಲ ಾಗಿದೆ ಅಂದರೆ ಸರಿ. ಎರಡೂವರೆ ವರ್ಷದ ಹಿಂದುಗಡೆ ಕಟ್ಟಡ ಕಾಮಗಾರಿ ಪ್ರಾರಂಬಿಸಿರುತ್ತೇನೆ. ಆ ಸಂಧರ್ಬ ದಲ್ಲಿ ಪ್ಲಾಟ ನಂ 17/2 ನನ್ನ ಹೆಸರಿನಲ್ಲಿ ಇರಲಿಲ್ಲ ಅಂದರೆ ನಿಜ.

ಪ್ರಶ್ನೆ ಃ ಎಲ್ಲರೂ ಒಟ್ಟಿಗೆ ಇರೋಣ ಅಂತಾ ನಾನು ಭರವಸೆಕೊಟ್ಟ ಕಾರಣ, ವಾದಿಯ ಪ್ಲಾಟನಲ್ಲಿ ನಾನು ಮನೆ ಕಟ್ಟಿಸುತ್ತಿದ್ದರೂ ಅವರು ಸುಮ್ಮನೆ ಇದ್ದರು.

ಉತ್ತರಃ ಆ ರೀತಿ ನಾನು ಭರವಸೆ ಕೊಟ್ಟಿರಲಿಲ್ಲ, ವಾದಿ ನನ್ನಿಂದ 5 ಲಕ್ಷ ರೂ. ಸಂಚಗಾರ

ಹಣ ಪಡೆದು, ಕರಾರು ಪತ್ರಕ್ಕೆ ಸಹಿ ಮಾಡಿ ಕೊಟ್ಟಿದರು, ಆ ಪ್ಲಾಟನ್ನು ನಾನು ಖರೀದಿಸಿದ್ದ ಕಾರಣ ಕಟ್ಟಿಸಿರುತ್ತೇನೆ. ಸಾಕ್ಷಿ ಪುನಃ ಹೇಳುತ್ತಾರೆ ವಾದಿ ನನ್ನಿಂದ ಹಣ ಪಡೆದು, ಸಂಚಗಾರ ಪತ್ರ ಬರೆದುಕೊಟ್ಟಿಲ್ಲಾ ಆದರೆ ಇಂಜನೀಯರ ಬಳಿ ಬಂದು, ನಾನು ಸಲ್ಲಿಸಿದ ಯೋಜನೆಗೆ ಒಪ್ಪಿಗೆ ಇದೆ ಅಂತಾ ಸಹಿ ಮಾಡಿರುತ್ತಾರೆ. ನಾವು ಎಲ್ಲರೂ ಒಟ್ಟಿಗೆ ಹೊಸ ಮನೆಯಲ್ಲಿ ಇರೋಣ ಅಂತಾ ಹೇಳಿದ್ದಕ್ಕೆ ಅವರು ಒಪ್ಪಿ ಪ್ಲಾನ್‌ಗೆ ಸಹಿ ಮಾಡಿದ್ದಾರೆ, ನಾನು ಅವರಿಗೆ 5 ಲಕ್ಷ ರೂ. ಹಣ ನೀಡಿಲ್ಲಾ ಅಂದರೆ ಸರಿಯಲ್ಲ. ದಿಃ 13-10-2015 ರಂದು, ವಾದಿಗೆ ನಮ್ಮ ಕಚೇರಿಯ ಸಿಬ್ಬಂದಿಯ ಸಮಕ್ಷಮ 5 ಲಕ್ಷ ರೂ. ನಗದು ಹಣ ಕೊಟ್ಟಿರುತ್ತೇನೆ. ಈ ವಿಷಯವನ್ನು ಖರೀದಿ ಪತ್ರದಲ್ಲಿ ನಮೂದಿಸಿಲ್ಲಾ ಆದರೆ ಹಂತ ಹಂತವಾಗಿ ಕೊಟ್ಟಿರುತ್ತೇನೆ ಅಂತಾ ನಮೂದಿಸಿರುತ್ತೇನೆ.

3. ನಗದು ವ್ಯವಹಾರ ನಾನು ಮಾಡುವುದಿಲ್ಲ ಆದ ಕಾರಣ ನಗದು ಪುಸ್ತಕ ನಾನು ಇಟ್ಟುಕೊಂಡಿಲ್ಲಾ. ಆದರೆ 5 ಲಕ್ಷ ರೂ. ಕೊಟ್ಟ ಬಗ್ಗೆ ನಿಡಿ 5-6 ರಲ್ಲಿ ನಮೂದಿಸಿಲ್ಲಾ. ಕ್ರಯ ಪತ್ರ ಆದ ದಿನ 3,26,000-00 ರೂ ನಗದು ಹಣ ವಾದಿ ಕೊಟ್ಟಿರುತ್ತೇನೆ ಆ ನಂತರ ಅವರು ಸಹಿ ಮಾಡಿರುತ್ತಾರೆ. ಕ್ರಯ ಪತ್ರ ಆದ ದಿನ 3,26,000-00 ವಾದಿಗೆ ಕೊಡಲಾಗಿದೆ ಅಂತಾ ನಮೂದು ಆಗಿಲ್ಲ ಎಂದರೆ ಸರಿ. ಆದಾಯ ತೆರಿಗೆ 31-3-2017 ರ ಬ್ಯಾಲೆನ್ಸ ಶೀಟನಲ್ಲಿ ವಿವರಗಳಲ್ಲಿ 2,20,000-00 ರೂ. ಕಿಮ್ಮತ್ತಿನ ಪ್ಲಾಟ ಎಂದು ನಮೂದಿಸಿದ್ದು ಅದು ನಾನು ಖರೀದಿದ ಪ್ಲಾಟ ವಿವರವಾಗಿದೆ. ಸಾಕ್ಷಿ ಪುನಃ ಹೇಳುತ್ತಾರೆ ವಾದಿಯ ಕಡೆಯಿಂದ ಆಗಷ್ಟ 2017 ರಲ್ಲಿ ಖರೀದಿಸಿದ್ದು, ಅದನ್ನು ಈ ವರ್ಷದ ಆದಾಯ ತೆರಿಗೆ ವಿವರಗಳಲ್ಲಿ ತೋರಿಸಲಾಗುತ್ತದೆ. ನಾನು ಹಣ ಕೊಟ್ಟು ಖರೀದಿ ಮಾಡಿಲ್ಲಾವಾದ ಕಾರಣ ಅದನ್ನು ತೋರಿಸುವ ಯಾವುದೇ ದಾಖಲೆಗಳು ಇಲ್ಲಾ ಅಂದರೆ ಸರಿಯಲ್ಲ.

4. ವಾದಿಯ ಮಗಳೊಂದಿಗೆ ನನ್ನ ಮದುವೆ ಹಿರಿಯರು ನಿರ್ಧರಿಸಿದಂತೆ ಆಗಿರುತ್ತದೆ. ನಾನು ವಾದಿಯ ಮಗಳಿಗೆ ಹಿಂಸೆ ಕೊಟ್ಟಿದಕ್ಕೆ, ನವನಗರ ಪೋಲಿಸ ಠಾಣೆಗೆ ಬಹಳಷ್ಟು ಸಾರಿ ದೂರುಗಳು ಹೋಗಿವೆ ಅಂದರೆ ಸರಿಯಲ್ಲ. ನನ್ನ ಮಗಳ ನನ್ನ ವಿರುದ್ದ ದೂರು ಸಲ್ಲಿಸಿರುತ್ತಾಳೆ ಅಂದರೆ ಸರಿಯಲ್ಲ. ನಮ್ಮ ನಮ್ಮ ನಡುವೆ ಜಗಳಗಳು ಆಗಿದ್ದು ಹಿರಿಯರು ಸೇರಿ ಬಗೆಹರಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು ನಾನು ಚೆನ್ನಾಗಿದ್ದೆವೆ ಎಂದು ತೋರಿಸಲು ಅವರನ್ನು ಕರೆದುಕೊಂಡು ಬಂದು ನಾನು ಸಾಕ್ಷಿ ಮಾಡಿಸಬಲ್ಲ.

5. ಎಲ್ಲರೂ ಒಟ್ಟಿಗೆ ಇರೋಣ ಅಂತಾ ಹೇಳಿ ಮನೆ ಕಟ್ಟಿ ಆಮೇಲೆ ವಾದಿಗೆ ನಾನು ನಮ್ಮೊಂದಿಗೆ ಇರಲು ಬಿಡಲಿಲ್ಲ. ಆ ಕಾರಣ ವಾದಿ ನನಗೆ ತಕರಾರು ಮಾಡಿದ ಅಂದರೆ ಸರಿಯಲ್ಲ. ವಾದಿಯನ್ನು ಸರಿ ದಾರಿಗೆ ತರಲು ನನ್ನ ಹೆಂಡತಿಗೆ ನಾನು ಹಿಂಸೆ ಕೊಡಲು ನಾನು ಪ್ರಾರಂಭಿಸಿದೆ ಎಂದರೆ ಸರಿಯಲ್ಲ. ಆಗ ವಾದಿ ಸದರಿ ಪ್ಲಾಟನ್ನು ತನ್ನ ಮಗಳ ಹೆಸರಿನಲ್ಲಿ ವರ್ಗಾಯಿಸಿಕೊಡುತ್ತೇನೆ ಅಂತಾ ಹೇಳಿದರು ಅಂದರೆ ಸರಿಯಲ್ಲ. ಆಗ ನಾನು ಮನೆ ಕಟ್ಟಲು ಬ್ಯಾಂಕನಲ್ಲಿ ಸಾಲ ತೆಗೆದುಕೊಂಡಿದ್ದೇನೆ ಪ್ಲಾಟನ್ನು ನನ್ನ ಹೆಸರಿನಲ್ಲಿಯೇ ವರ್ಗಾವಣೆ ಮಾಡಿಕೊಡಬೇಕೆಂದು ನಾನು ಹಠ ಮಾಡಿದ್ದೇನೆ ಅಂದರೆ ಸರಿಯಲ್ಲ. ಆ ಕಾರಣ ವಾದಿ ಹಣ ಪಡೆಯದೆ ಸದರಿ ಪ್ಲಾಟನ್ನು ಕ್ರಯ ಪತ್ರದ ಮುಖಾಂತರ ನನ್ನ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ಕೇಂದ್ರ ಸರ್ಕಾರ ನಗದು ಅಮಾಣಿಕರಣ ಮಾಡಿದ ಮೇಲೆ 2 ಲಕ್ಷದಿಂದ ಮೆಲ್ಮಟ್ಟು ವ್ಯವಹಾರವಿದ್ದಲ್ಲಿ , ಅದನ್ನು ನಗದು ರೂಪದಲ್ಲಿ ಮಾಡಬಾರದು, ಡಿಡಿ ಅಥವಾ ಚೆಕ್ಕ ಮುಖಾಂತರ ವ್ಯವಹಾರ ಮಾಡಬೇಕು ಅಂತ ಆದೇಶ ಆಗಿದೆ ಅಂದರೆ ಸರಿ. ಅದಕ್ಕೆ ತಪ್ಪಿದಲ್ಲಿ ದಂಡ ಮತ್ತು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ ವಾದಿ ತನಗೆ ತನ್ನ ಹೆಸರಿನಲ್ಲಿ ಯಾವುದೇ ಬ್ಯಾಂಕ ಖಾತೆ ಇಲ್ಲಾ, ನಗದು ಕೊಡಬೇಕು ಅಂತಾ ಹೇಳಿದರು ಆದ್ದರಿಂದ ನಾನು ನಗದು ಹಣ ಕೊಟ್ಟಿರುತ್ತೇನೆ. ನಾನು ವ್ಯಾಪಾರಸ್ಥನಾಗಿದ್ದು , ನಗದು ಮುಖಾಂತರ ಹಣ ನೀಡಿದಾಗ ಅದಕ್ಕೆ ರಸೀದಿ ಪಡೆಯಬೇಕೆನ್ನುವ ಸಾಮಾನ್ಯ ಜ್ಞಾನ ನನಗೆ ಇದೆ ಆದರೆ ವಾದಿ ನನ್ನ ಮಾವನಾದ ಕಾರಣ ನಾನು ರಸೀದಿ ಪಡೆದು ಕೊಂಡಿಲ್ಲಾ. ವಾದಿ ನನ್ನ ಮಾವನಾದ ಕಾರಣ ಅವರಿಗೆ ಹೆದರಿಸಿ, ಬೆದರಿಸಿ ಕ್ರಯ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ನನಗೆ ಸೇರದ ಜಾಗೆಯಲ್ಲಿ ನಾನು ಕಟ್ಟಡ ಮಾಡಿದ್ದು ಅದು ಕಾನೂನು ಬಾಹಿರ ಎಂದು ಮಾಡಿದ ಸಲಹೆಗೆ ಹೌದು ಎಂದು ಒಪ್ಪಿಕೊಂಡು, ವಾದಿ ನನಗೆ ಮನೆ ಕಟ್ಟಿಕೊಳ್ಳಿ ಅಂತಾ ಹೇಳಿದ ಭರವಸೆ ಮೇರೆಗೆ ಕಟ್ಟಿಸಿರುತ್ತೇನೆ ಅಂದರೆ ಸರಿ .

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.